## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

**ಸಿ.ಸಿ.105/2023**

| | | | | |
|---|---|---|---|---|
| 01 | ಹೆಸರು | ರವೀಶ ಬಿ | ಸಿ ಡಬ್ಲೂ | 1 |
| 02 | ತಂದೆಯ ಹೆಸರು | ಲೇ. ಬೋರಯ್ಯ | ಪಿಡಬ್ಲೂ | 1 |
| 03 | ವಯಸ್ಸು | 35 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವ್ಯವಸಾಯ | 16.02.2026 | |
| 05 | ಊರು | ಬೆಂಡರವಾಡಿ ಗ್ರಾಮ, ಮಂಡ್ಯ ಜಿಲ್ಲೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಚಾ ಸಾ 2 ನನ್ನ ತಂದೆ ಇರುತ್ತಾರೆ. ಅವರು ಈಗ ಮೃತಪಟ್ಟಿರುತ್ತಾರೆ. ಚಾ ಸಾ 3 ನನ್ನ ಹೆಂಡತಿ ಇರುತ್ತಾರೆ. ಚಾ ಸಾ 4 ರಿಂದ 7 ರವರು ನಮ್ಮ ಊರಿನವರು ಇರುತ್ತಾರೆ. ಆರೋಪಿಯು ನನ್ನ ಹೆಂಡತಿಯ ಅಕ್ಕನ ಗಂಡ ಇರುತ್ತಾರೆ.

ದಿಃ11.05.2022 ರಂದು ಸಂಜೆ 5.40 ಗಂಟೆಗೆ ನನಗೆ ಚಾ ಸಾ 5 ರವರು ಕರೆ ಮಾಡಿ ನಿಮ್ಮ ಹೆಂಡತಿ ಮನೆ ಬಿಟ್ಟು ಹೋಗುತ್ತಿದ್ದಾಳೆ ಎಂದು ತಿಳಿಸಿರುತ್ತಾರೆ. ಆಗ ನಾನು ನನ್ನ ತಂದೆಯಾದ ಚಾ ಸಾ 2 ರವರಿಗೆ ಫೋನ್ ಮಾಡಿ ನನ್ನ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬರುವಂತೆ ಹೇಳಿರುತ್ತೇನೆ. ನನ್ನ ತಂದೆ ನನ್ನ ಹೆಂಡತಿಯನ್ನು ಕರೆದುಕೊಂಡು ಬರಲು ಹೋದಾಗ ನಂಜಾಪುರ ಕಾಲುವೆಯ ಸೇತುವೆ ಬಳಿ ನನ್ನ ಹೆಂಡತಿ ನಡೆದುಕೊಂಡು ಹೋಗುತ್ತಿದ್ದು ಆಗ ನನ್ನ ತಂದೆ, ನಿನ್ನ ಗಂಡ ಬಂದ ಮೇಲೆ ಹೋಗು ಎಂದು ಹೇಳಿದ್ದು, ಆಗ ಆರೋಪಿಯು ಮೋಟಾರ್ ಸೈಕಲ್ ನಲ್ಲಿ ಅಲ್ಲೇ ಇದ್ದು ಚಾ ಸಾ 3 ರವರು ಆರೋಪಿಯ ಮೋಟಾರ್ ಸೈಕಲ್ ಅನ್ನು ಹತ್ತುತ್ತಿದ್ದಾಗ ಚಾ ಸಾ 2 ರವರು ತಡೆಯಲು ಹೋದಾಗ ಆರೋಪಿಯು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ನನ್ನ ತಂದೆಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ. ಅಲ್ಲಿದ್ದ ನಂಜಾಪುರ ಗ್ರಾಮಸ್ಥರು ನನ್ನ ತಂದೆಗೆ ನೀರು ಕುಡಿಸಿ ಕಳುಹಿಸಿರುತ್ತಾರೆ. ನಂತರ ನಾನು ನನ್ನ ತಂದೆಗೆ ಚಿಕಿತ್ಸೆ ಕೊಡಿಸಿರುತ್ತೇನೆ. ಆರೋಪಿಯು ಹತ್ತಿರದ ಸಂಬಂಧಿಕರಾದ ಕಾರಣ ನಾನು ತಡವಾಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಹಾಗೂ ಹಾಗೂ ಸಾಕ್ಷಿಯಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಆರೋಪಿಯು ನನ್ನ ತಂದಗೆ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಂದೆಗೆ ಎದ್ದು ಹೋಗಲು ಬಿಡದೇ ಅಡ್ಡಗಟ್ಟಿ ನಿಲ್ಲಿಸಿಕೊಂಡು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಸ್ ಬಿ ವಕೀಲರಿಂದಃ**

ನಾನು ಈಗ ಯಾವುದೇ ಕೆಲಸ ಮಾಡುವುದಿಲ್ಲ. ಘಟನೆಯ ದಿನದಂದು ನಾನು ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಸೆಕ್ಯುರಿಟಿ ಕೆಲಸ ಮಾಡುತ್ತಿದ್ದೆ. ನಾನು ಒಟ್ಟು 10 ವರ್ಷ ಸೆಕ್ಯುರಿಟಿಯಾಗಿ ಕೆಲಸ ಮಾಡಿರುತ್ತೇನೆ.

ನಾನು ನಿ ಪಿ 1 ರಲ್ಲಿ ಉಲ್ಲೇಖಿಸಿರುವ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಹೆಂಡತಿ ಮನೆ ಬಿಟ್ಟು ಹೋಗುತ್ತಿದ್ದಾಳೆ ಎನ್ನುವ ವಿಷಯವನ್ನು ಚಾ ಸಾ 5 ರವರು ತಿಳಿಸಿರುತ್ತಾರೆ. ಈ ರೀತಿ ಗಲಾಟೆಯಾದ ಬಗ್ಗೆ ನನಗೆ ನನ್ನ ತಂದೆಯಾದ ಚಾ ಸಾ 2 ರವರು ಹೇಳಿರುತ್ತಾರೆ. ಗಲಾಟೆಯಾದ ದಿನದಂದು ನಾನು ದೂರು ಕೊಟ್ಟಿರುತ್ತೇನೆ. ಆ ದಿನ ನನ್ನ ಹೆಂಡತಿ ಕಾಣೆಯಾಗಿರುವುದಾಗಿ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ.

ನಾನು ಚಾ ಸಾ 2 ರವರಿಗೆ ಹಲ್ಲೆ ಮಾಡಿರುವ ಬಗ್ಗೆ ನಾನು ನಿ ಪಿ 1 ರಂತೆ ದಿಃ27.05.2022 ರಂದು ದೂರು ಕೊಟ್ಟಿರುತ್ತೇನೆ. ನಾನು ಗಲಾಟೆಯಾದ ದಿನದಂದೇ ಸದರಿ ಆರೋಪಿಯ ವಿರುದ್ಧ ದೂರು ಕೊಡಲು ಹೋದಾಗ ಪೊಲೀಸರು ನನಗೆ ನನ್ನ ಹೆಂಡತಿ ಕಾಣೆಯಾಗಿರುತ್ತಾಳೆ ಎಂದು ದೂರುಕೊಡುವಂತೆ ಸೂಚಿಸಿರುತ್ತಾರೆ, ಹಾಗಾಗಿ ನಾನು ಆ ದಿನ ಆರೋಪಿಯ ವಿರುದ್ಧ ದೂರು ಕೊಟ್ಟಿರುವುದಿಲ್ಲ. ನಾನು ಘಟನೆಯಾದ ದಿನದಂದು ನಾನು ಕೆಲಸ ಮುಗಿಸಿ ಮನೆಗೆ ಬಂದಿರುತ್ತೇನೆ. ನನ್ನ ತಂದೆ ಖಾಯಿಲೆಯಿಂದ ಬಳಲುತ್ತಿದ್ದ ಕಾರಣ ಅವರು ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ತಂದೆಗೆ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮಂಡಿ ನೋವು ಇದ್ದ ಕಾರಣ ಅವರಿಗೆ ಎದ್ದು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನಾನು ನನ್ನ ತಂದೆಗೆ ಆರೋಪಿಯು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುವುದಾಗಿ ಹೇಳಿದ್ದು ಮತ್ತು ನಾನು ಹೇಳುವಂತೆ ನನ್ನ ತಂದೆ ಓಡಾಡಲು ಶಕ್ತನಾಗಿದ್ದ ಕಾರಣ ಅವರೇ ಖುದ್ದಾಗಿ ಪೊಲೀಸರಿಗೆ ದೂರು ಕೊಡಬಹುದಿತ್ತು ಎಂದರೆ ಸಾಕ್ಷಿಯು ರಾತ್ರಿಯಾದ ಕಾರಣ ಮತ್ತು ಅವರಿಗೆ ಸುಸ್ತಾದ ಕಾರಣ ಅವರು ಪೊಲೀಸರಿಗೆ ಆ ದಿನ ದೂರು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ವಿಚಾರವನ್ನು ನಾನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ. ಗಲಾಟೆಯಾದ ದಿನದಂದು ನಾನು ನನ್ನ ತಂದೆಯನ್ನು ಮಂಜುನಾಥ ಕ್ಲಿನಿಕ್ ಗೆ ಕರೆದುಕೊಂಡು ಹೋಗಿ ಪೇನ್ ಕಿಲ್ಲರ್ ಮಾತ್ರೆ ಮತ್ತು ಚುಚ್ಚುಮದ್ದು ಕೊಡಿಸಿರುತ್ತೇನೆ.

ನನ್ನ ಹೆಂಡತಿ ಗರ್ಭಿಣಿಯಾಗಿದ್ದಾಗ ನಾನು ನನ್ನ ಹೆಂಡತಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ಕೊಟ್ಟ ಕಾರಣ ನನ್ನ ಹೆಂಡತಿ ನನ್ನ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಆ ರೀತಿ ಸುಳ್ಳು ದೂರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ರೀತಿ ನನ್ನ ಹೆಂಡತಿ ನನ್ನ ವಿರುದ್ಧ ದೂರು ಕೊಟ್ಟ ಕಾರಣ ನಾನು ಆರೋಪಿಯ ವಿರುದ್ಧ ಈ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿಯು ನನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಅಕ್ರಮ ತಡೆ ಮಾಡಿರುವುದಿಲ್ಲ ಮತ್ತು ಕಾಲಿನಿಂದ ತುಳಿದು ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಮೇಲಿನ ವೈಮನಸ್ಸಿನಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.